**ಯೇತಿಯ ಕುರಿತಾದ ಕಥೆಗಳು ಜಗತ್ತಿನ ಎಲ್ಲ ಭಾಗಗಳಲ್ಲೂ ಇವೆ. ಈ ಕಥನಗಳ ಮೂಲಕ ಮನುಷ್ಯ ಯಾವುದಕ್ಕಾಗಿ ಹಂಬಲಿಸುತ್ತಿದ್ದಾನೆ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು.**

ಎರಿಕ್ ಶಿಫ್ಟನ್ ಅವರೊಂದಿಗೆ ಬೃಹತ್ ಹೆಜ್ಜೆಗುರುತನ್ನು ದಾಖಲಿಸಿದ್ದ ಮೈಕೆಲ್ ವಾರ್ಡ್, ‘ಅನೇಕ ವರ್ಷಗಳ ಅಧ್ಯಯನದ ನಂತರ ನಾವು ಹುಡುಕುತ್ತಿದ್ದ ವಿಶಿಷ್ಟ ಪ್ರಾಣಿಯ ಅಸ್ತಿತ್ವ ಸುಳ್ಳೆನ್ನಿಸುತ್ತಿದೆ. ಸೋಂಕಿಗೊಳಗಾಗಿ ಅಸಹಜ ಗಾತ್ರಪಡೆದ ಮನುಷ್ಯರ ಪಾದಗಳ ಹೆಜ್ಜೆಗುರುತುಗಳನ್ನು ನಾವು ಕಂಡಿರಬಹುದು. ಇಲ್ಲವೇ ಒಂದು ಹೆಜ್ಜೆಗುರುತಿನ ಮೇಲೆ ಮತ್ತೊಂದಷ್ಟು ಹೆಜ್ಜೆಗಳು ಮೂಡಿ, ಆ ಗುರುತು ದೊಡ್ಡದಾಗಿರುವ ಸಾಧ್ಯತೆಯೂ ಇದೆ. ಕಂದು ಕರಡಿಯ ಹೆಜ್ಜೆಗಳೂ ಅವಾಗಿರಬಹುದು’ – ಹೀಗೆ ಸಾಧ್ಯತೆಗಳ ಪಟ್ಟಿ ಮುಂದಿಡುತ್ತಾರೆ. ಹೀಗೆ ಯೇತಿಯ ಅಸ್ತಿತ್ವವನ್ನು ನಿರಾಕರಿಸುತ್ತಲೇ ಅವರು ಹೇಳುವ ಮಾತೊಂದು ಅರ್ಥವತ್ತಾಗಿದೆ – ‘ಇದೊಂದು ಎಂದಿಗೂ ಬಗೆಹರಿಯದು ಒಗಟು’ ಎನ್ನುವ ಮಾತದು.

ಎರಿಕ್‌ರ ಮಾತನ್ನು ಮುಂದುವರಿಸುವಂತೆ, 2004ರಲ್ಲಿ ‘ನೇಚರ್ಸ್’ ಪತ್ರಿಕೆಯ ಸಂಪಾದಕ ಹೆನ್ರಿ ಗೀ ‘ವಿಸ್ತೃತ ಅಧ್ಯಯನಕ್ಕೆ ಯೋಗ್ಯವಾದ ಜನಪ್ರಿಯ ಪ್ರಾಣಿ’ ಎಂದು ಯೇತಿಯನ್ನು ಬಣ್ಣಿಸಿದ್ದಾರೆ, ಹಿಮಮಾನವನ ರೀತಿಯ ಜೀವಿ ಬದುಕುಳಿದಿರುವ ವದಂತಿಗಳಲ್ಲಿ ಸತ್ಯಾಂಶವೂ ಇರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. 2007ರಲ್ಲಿ ಅಮೆರಿಕದ ಜೋಶುವಾ ಗೇಟ್ಸ್ ಮತ್ತು ಸಂಗಡಿಗರು ನೇಪಾಳದಲ್ಲಿ ಯೇತಿಯ ಹೆಜ್ಜೆಸಾಲುಗಳನ್ನು ಕಂಡಿರುವುದಾಗಿ, ಕೂದಲ ಸ್ಯಾಂಪಲ್‌ಗಳನ್ನು ಸಂಗ್ರಹಿಸಿದ್ದಾಗಿ ಹೇಳಿದ್ದರು. ಈ ಕೂದಲುಗಳು ಅಪರಿಚಿತ ಸಸ್ತನಿಗೆ ಸೇರಿವೆ ಎನ್ನುವ ಸಂಗತಿ ಕೂಡ ಯೇತಿಗಳ ಅಸ್ತಿತ್ವದ ಬಗ್ಗೆ ಮತ್ತೆ ಯೋಚಿಸುವಂತೆ ಮಾಡಿದೆ. ಜಪಾನಿನ ಪರ್ವತಾರೋಹಿಗಳು ಕೂಡ 2008ರಲ್ಲಿ ಯೇತಿಯ ಹೆಜ್ಜೆಗುರುತುಗಳನ್ನು ಕಂಡಿರುವುದಾಗಿ ಹೇಳಿಕೊಂಡಿದ್ದಾರೆ. ಈಗ ಭಾರತೀಯ ಸೇನೆ ಯೇತಿಯ ಕುರಿತಾದ ಚರ್ಚೆಗಳಿಗೆ ಹೊಸ ಕೊಂಡಿಯನ್ನು ಸೇರಿಸಿದೆ.

ಭಾರತೀಯ ಸೇನೆ ಕಂಡಿರುವ ಹೆಜ್ಜೆಗುರುತು ಈವರೆಗೆ ಕಂಡಿರುವ ಹೆಜ್ಜೆಗುರುತುಗಳಲ್ಲೇ ಗಾತ್ರದಲ್ಲಿ ಅತಿ ದೊಡ್ಡದು. ‘ಈ ಹೆಜ್ಜೆಗುರುತು ಯೇತಿಯದ್ದಲ್ಲ, ಕರಡಿಯದು’ ಎಂದು ನೇಪಾಳ ಸೇನೆ ಹೇಳಿದೆ. ಸ್ಥಳೀಯರನ್ನು ವಿಚಾರಿಸಿದ ನಂತರ ಈ ನಿಲುವಿಗೆ ಬಂದಿರುವುದಾಗಿ ಅದು ಹೇಳಿದೆ. ‘ಬಹುಶಃ ಈ ಹೆಜ್ಜೆ ಹಿಮಾಲಯದ ಕಪ್ಪು ಕರಡಿಯದ್ದಾಗಿರಬಹುದು. ಒಂದು ತನ್ನ ಒಂದು ಹೆಜ್ಜೆಯ ಮೇಲೆ ಇನ್ನೊಂದು ಹೆಜ್ಜೆಯನ್ನಿರಿಸಿ ನಡೆದಿರುವುದರಿಂದ, ಅದರ ಒಂದು ಹೆಜ್ಜೆಯಷ್ಟೇ ಹಿಮದ ಮೇಲೆ ಮೂಡಿರುವ ಸಾಧ್ಯತೆಯಿದೆ’ ಎನ್ನುವುದು, ‘ಯೇತಿ: ದಿ ಎಕಾಲಜಿ ಆಫ್ ಎ ಮಿಸ್ಟರಿ’ ಕೃತಿಯ ಲೇಖಕ ಡೇನಿಯಲ್ ಸಿ. ಟೇಲರ್ ಅವರ ಅಭಿಪ್ರಾಯ.



## ಜೀವವೈವಿಧ್ಯದ ಕಾಳಜಿ

ಯೇತಿಯಕುರಿತಶತಮಾನದಹುಡುಕಾಟದಿಂದ ಮನುಕುಲಕ್ಕೆ ದೊರೆತಿರುವುದಾದರೂ ಏನು? ಈ ಪ್ರಶ್ನೆಗೆ ಉತ್ತರರೂಪದಲ್ಲಿ ಹಿಲರಿ ಅವರ ಮಾತುಗಳನ್ನೇ ಉಲ್ಲೇಖಿಸಿರಬಹುದು. ಹಿಮಾಲಯದ ಕುರಿತ ತಮ್ಮ ಜೀವಮಾನದ ಶೋಧ–ಸಂಶೋಧನೆಯ ನಂತರ ಕಂಡುಕೊಂಡ ಸತ್ಯವೇನು ಎನ್ನುವ ಪ್ರಶ್ನೆಯೊಂದಕ್ಕೆ ಅವರು ನೀಡಿದ ಉತ್ತರವನ್ನು ಹೀಗೆ ಸಂಗ್ರಹಿಸಬಹುದು: ‘ಈ ಹುಡುಕಾಟದ ಸರಣಿ ಜೀವವಿಜ್ಞಾನದ ಕುರಿತ ನನ್ನ ಯೋಚನಾವಿಧಾನವನ್ನೇ ಬದಲಾಯಿಸಿತು. ಪ್ರಕೃತಿಯಲ್ಲಿನ ಸ್ಥಿತಿಸ್ಥಾಪಕತ್ವ ಗುಣ ಮನದಟ್ಟಾಯಿತು. ಜೀವಸಂರಕ್ಷಣೆಯ ಬಗ್ಗೆ ಯೋಚಿಸುವ ನಾವು ಡಿಎನ್‌ಎ ವೈವಿಧ್ಯದ ಬಗ್ಗೆ ಗಮನಹರಿಸಬೇಕು. ಮೊಸಳೆ, ಜೀಬ್ರಾದಂತಹ ಪ್ರಾಣಿಗಳು ಹವಾಮಾನ ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳುವ ಸ್ಥಿತಿಸ್ಥಾಪಕತ್ವ ಗುಣ ಹೊಂದಿವೆ. ಪ್ರಕೃತಿಯಲ್ಲಿನ ಸ್ಥಿತಿಸ್ಥಾಪಕತ್ವ ಗುಣವನ್ನು ರಕ್ಷಿಸುವ ಅಗತ್ಯವನ್ನು ಯೇತಿಯ ಪಾಠದಿಂದ ಕಲಿತಿದ್ದೇನೆ. ನಾವು ಈ ಜೀವಜಾಲದ ಭಾಗವೆನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಯೇತಿಯ ಕುರಿತಾದ ಕಥೆಗಳು ಜಗತ್ತಿನ ಎಲ್ಲ ಭಾಗಗಳಲ್ಲೂ ಇವೆ. ರಷ್ಯಾ, ಚೀನಾದ ಜಾನಪದ ಕಥೆಗಳಲ್ಲೂ ಯೇತಿಯಂಥ ಪ್ರಾಣಿಗಳಿವೆ. ಈ ಕಥನಗಳ ಮೂಲಕ ಮನುಷ್ಯ ಯಾವುದಕ್ಕಾಗಿ ಹಂಬಲಿಸುತ್ತಿದ್ದಾನೆ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಈ ಪ್ರಶ್ನೆಯ ಮೂಲಕ ಸ್ಪಷ್ಟವಾಗುವುದಿಷ್ಟೇ – ವಿಕ್ಟೋರಿಯನ್ ಯುಗದಿಂದ ಇಲ್ಲಿಯವರೆಗೂ ಮನುಷ್ಯ ಈ ವಿಶ್ವದ ವೃತ್ತವನ್ನು ಪೂರ್ಣಗೊಳಿಸಬಹುದಾದ ಯಾವುದೋ ಕಳಚಿದ ಕೊಂಡಿಯ ಹುಡುಕಾಟದಲ್ಲಿದ್ದಾನೆ. ಈ ಪೂರ್ಣಗೊಳಿಸುವಿಕೆಯನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ನಮಗೆ ಸಂಕೇತಗಳ ಅಗತ್ಯವಿದೆ. ಮನುಷ್ಯನ ಇತಿಹಾಸ ಹಾಗೂ ಸಂಸ್ಕೃತಿಗಳುದ್ದಕ್ಕೂ ನಾವು ಸಂದೇಶವಾಹಕರಾಗಿ ಬೆಳೆಯುತ್ತಾ ಬಂದಿದ್ದೇವೆ.’

ಹಿಲರಿ ಅವರ ಮಾತು ಯೇತಿಯ ಹುಡುಕಾಟಕ್ಕೆ ತಾತ್ವಿಕ ಆಯಾಮವನ್ನು ನೀಡುವಂತಿದೆ. ಜೀವಜಾಲದ ಒಂದು ಕೊಂಡಿಯಾಗಿ ಮನುಷ್ಯನಿದ್ದರೆ, ಆ ಜಾಲವನ್ನು ಅರ್ಥ ಮಾಡಿಕೊಳ್ಳುವ ಒಂದು ಸಂಕೇತವಾಗಿ ಯೇತಿಯನ್ನು ನೋಡಲಿಕ್ಕೆ ಅವಕಾಶವಿದೆ. ಹಿಲರಿಯವರ ಮಾತಿಗೆ ಪೂರಕವಾಗಿ ಕನ್ನಡದ ಪೂರ್ಣಚಂದ್ರ ತೇಜಸ್ವಿಯವರ ‘ಕರ್ವಾಲೊ’ ಕಾದಂಬರಿಯನ್ನು ನೋಡಬಹುದು. ತೇಜಸ್ವಿ ಕಥನದಲ್ಲಿ ಯೇತಿಯ ಜಾಗದಲ್ಲಿ ಹಾರುವ ಓತಿಯಿದೆ. ಕರ್ವಾಲೊ ಜಾಗದಲ್ಲಿ ಹಿಲರಿಯನ್ನೂ ಮಂದಣ್ಣನ ರೂಪದಲ್ಲಿ ಖುಮ್‌ಜುಂಗ್ ಗ್ರಾಮದ ಮುಖ್ಯಸ್ಥ ಖುಂಜೊ ಚುಂಬಿ ಅವರನ್ನೂ ನೋಡಲಿಕ್ಕೆ ಸಾಧ್ಯವಿದೆ. ಕರ್ವಾಲೊ ಎನ್ನುವ ವಿಜ್ಞಾನಿ ಓತಿಯನ್ನು ಹುಡುಕುತ್ತಾ ಕಾಡು ಅಲೆಯುವ ಕಥೆ ಕಾದಂಬರಿಯದು. ಓತಿಯ ಹುಡುಕಾಟದ ಮೂಲಕ ಪ್ರಕೃತಿಯ ಜೀವವೈವಿಧ್ಯದ ಅನನ್ಯತೆಯನ್ನು ಪರಿಚಯಿಸುವ ಕಾದಂಬರಿ, ಜೀವವಿಕಾಸದ ಚಕ್ರದಲ್ಲಿ ಮನುಷ್ಯ ಒಂದು ಭಾಗವಾಗಿರುವಂತೆಯೇ ಓತಿಯೂ ಒಂದು ಕೊಂಡಿಯಾಗಿರುವುದನ್ನು ಸೂಚಿಸುತ್ತದೆ. ಈಗ ಯೇತಿಯ ಹುಡುಕಾಟದ ಮೂಲಕ ನಾವು ಅರಿಯಬೇಕಾದುದು ಇಷ್ಟೇ – ಪರಿಸರಚಕ್ರದ ಅನೇಕ ಕೊಂಡಿಗಳನ್ನು ನಾವು ಅರಿತೋ ಅರಿಯದೆಯೋ ಕಳೆದುಕೊಂಡಿದ್ದೇವೆ, ಕಳೆದುಕೊಳ್ಳುತ್ತಿದ್ದೇವೆ. ಕಳೆದುಕೊಂಡು ಹುಡುಕುವ ಬದಲು, ಕಳೆದುಕೊಳ್ಳುತ್ತಿರುವುದನ್ನು ರಕ್ಷಿಸುವ ಪರಿಸರಪ್ರೇಮದ ಪಾಠ ಯೇತಿಯ ರೂಪಕದಲ್ಲಿದೆ ಎನ್ನಿಸುತ್ತದೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in